ಕರ್ನಾಟಕ ಸರ್ಕಾರ ಕಾರ್ಮಿಕ ಇಲಾಖೆ

# ಕರ್ನಾಟಕ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಯೋಜನಾ ಸೊಸೈಟಿ (ರಿ.)

'ಕಾರ್ಮಿಕ ಭವನ', ಐ.ಟಿ.ಐ. ಆವರಣ, ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 029.

ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿಯು ಮಕ್ಕಳನ್ನು ದೈಹಿಕವಾಗಿ, ನೈತಿಕವಾಗಿ, ಮಾನಸಿಕವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೆ ಒಳಪಡಿಸಿ ಅವರ ಶಿಕ್ಷಣದ ಹಾಗೂ ಸರ್ವಾಂಗೀಣ ಪ್ರಗತಿಯ ಅವಕಾಶಗಳನ್ನು ತಡೆಗಟ್ಟುತ್ತದೆ. ಶಿಕ್ಷಣ ವಂಚಿತ ಹಾಗೂ ದುಡಿಮೆಯಲ್ಲಿ ತೊಡಗಿರುವ ಈ ಮಕ್ಕಳನ್ನು ರಾಷ್ಟ್ರದ ಮುಖ್ಯವಾಹಿನಿಗೆ ಕರೆ ತರಲು ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಹಾಗೂ ಸಾರ್ವಜನಿಕರು ಸಂಘಟಿತರಾಗಿ ಪ್ರಯತ್ನಿಸಬೇಕಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣ ಪ್ರತಿ ಮಗುವಿನ ಹಕ್ಕು ಹಾಗೂ ಅದನ್ನು ಪ್ರತಿ ಮಗುವಿಗೆ ದೊರಕಿಸುವುದು ಸರ್ಕಾರ ಹಾಗೂ ಪ್ರತಿ ನಾಗರೀಕನ ಕರ್ತವ್ಯವಾಗಿರುತ್ತದೆ. ಈ ಪದ್ಧತಿಯನ್ನು ನಿರ್ಮೂಲನೆ ಗೊಳಿಸುವ ನಿಟ್ಟಿನಲ್ಲಿ ಬಾಲ ಕಾರ್ಮಿಕ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ,1986ನ್ನು ಜಾರಿಗೊಳಿಸಲಾಗುತ್ತಿದ್ದು ಕಾಯ್ದೆಯ ಪ್ರಮುಖ ಪ್ರಾವಧಾನಗಳು ಈ ಕೆಳಗಿನಂತಿವೆ ;

1. ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರ ಅನ್ವಯ ಎಲ್ಲಾ ಉದ್ಯೋಗ ಮತ್ತು ಪ್ರಕ್ರಿಯೆಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನಿಯೋಜಿಸಿಕೊಳ್ಳುವುದು ಹಾಗೂ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಉದ್ದಿಮೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಹಾಗೂ ಸಂಜ್ಞೆಯ (ವಾರೆಂಟ್ ರಹಿತ ಬಂಧಿಸಬಹುದಾದ) ಅಪರಾಧವಾಗಿರುತ್ತದೆ.

2. ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986ರಂತೆ ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿಕೊಂಡಲ್ಲಿ ಅಂತಹ ಮೊದಲ ಅಪರಾಧಕ್ಕೆ ಮಾಲೀಕರಿಗೆ 6 ತಿಂಗಳಿನಿಂದ 2 ವರ್ಷಗಳವರೆಗೆ ಜೈಲು ಶಿಕ್ಷೆ ಅಥವಾ ರೂ. 20,000/– ರಿಂದ ರೂ. 50,000/–ಗಳವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿರುತ್ತದೆ. ಪುನರಾವರ್ತಿತ ಅಪರಾಧಕ್ಕೆ 1 ವರ್ಷದಿಂದ 3 ವರ್ಷಗಳ ವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿರುತ್ತದೆ. ಪೋಷಕರಾಗಿದ್ದಲ್ಲಿ ಲಘು ಶಿಕ್ಷಾ ಪ್ರಾವಧಾನವಿದ್ದು, ಪುನರಾವರ್ತಿತ ಅಪರಾಧಕ್ಕೆ ರೂ. 10,000/–ಗಳ ದಂಡವನ್ನು ವಿಧಿಸಬಹುದಾಗಿರುತ್ತದೆ.



3. ಗೌರವಾನ್ವಿತ ಭಾರತದ ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ (ಸಿವಿಲ್) ಸಂಖ್ಯೆ 465/1986ರಲ್ಲಿ ನೀಡಿರುವ ನಿರ್ದೇಶನದನ್ವಯ ತಪ್ಪಿತಸ್ಥ ಮಾಲೀಕರು ತಾವು ನಿಯೋಜಿಸಿಕೊಂಡಿದ್ದ ಪ್ರತಿ ಮಗುವಿಗೆ ರೂ. 20,000/–ಗಳನ್ನು ಮಕ್ಕಳ ಪುನರ್ವಸತಿಗೆ ರಚಿಸಲಾದ ಕಲ್ಯಾಣ ನಿಧಿಗೆ ಪಾವತಿಸಬೇಕಾಗಿರುತ್ತದೆ..

**14 ವರ್ಷದೊಳಗಿನ ಮಕ್ಕಳು ಯಾವುದೇ ಉದ್ಯೋಗ ಅಥವಾ ಪ್ರಕ್ರಿಯೆಗಳಲ್ಲಿ ಹಾಗೂ 18 ವರ್ಷ ವಯಸ್ಸಿನವರೆಗಿನ ಕಿಶೋರರು ಅಪಾಯಕಾರಿ ಉದ್ದಿಮೆಗಳಲ್ಲಿ ದುಡಿಯುವುದು ಕಂಡಲ್ಲಿ ತಕ್ಷಣವೇ ಈ ಕೆಳಕಂಡವರನ್ನು ಸಂಪರ್ಕಿಸಿ ದೂರು ನೀಡಿರಿ.**

**ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು (ಜಿಲ್ಲಾಪಂಚಾಯತ್)**




ರಾಜ್ಯ ದೂರವಾಣಿ ಸಂಖ್ಯೆ : 080-29752833

ಇ-ಮೇಲ್ :kscleps@gmail.com

## ಕಾಯ್ದೆಯಡಿ ಅಧಿಸೂಚಿತ : ಇಲಾಖೆಗಳು ಮತ್ತು ಅಧಿಕಾರಿಗಳು

1. ಪೊಲೀಸ್ ಇಲಾಖೆ :–
   ಅ) ಎಲ್ಲಾ ಪೊಲೀಸ್ ಠಾಣೆಗಳ ಠಾಣಾಧಿಕಾರಿಗಳು
   ಆ) ಪೊಲೀಸ್ ವೃತ್ತ ನಿರೀಕ್ಷಕರು
   ಇ) ಪೊಲೀಸ್ ಉಪ ಅಧೀಕ್ಷಕರು/ಸಹಾಯಕ ಪೊಲೀಸ್ ಆಯುಕ್ತರು
   ಈ) ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು/ಉಪ ಪೊಲೀಸ್ ಆಯುಕ್ತರು
   ಉ) ಇಲಾಖೆಯ ಉನ್ನತಾಧಿಕಾರಿಗಳು
2. ಕಾರ್ಮಿಕ ಇಲಾಖೆ :–
   ಅ) ಕಾರ್ಮಿಕ ನಿರೀಕ್ಷಕರು/ ಹಿರಿಯ ಕಾರ್ಮಿಕ ನಿರೀಕ್ಷಕರು
   ಆ) ಕಾರ್ಮಿಕ ಅಧಿಕಾರಿಗಳು
   ಇ) ಸಹಾಯಕ ಕಾರ್ಮಿಕ ಆಯುಕ್ತರು
   ಈ) ಉಪಕಾರ್ಮಿಕ ಆಯುಕ್ತರು
   ಉ) ಇಲಾಖೆಯ ಉನ್ನತಾಧಿಕಾರಿಗಳು
3. ಕಂದಾಯ ಇಲಾಖೆ :–
   ಅ) ಕಂದಾಯ ನಿರೀಕ್ಷಕರು
   ಆ) ನಾಡ ಕಛೇರಿಗಳ ಉಪ ತಹಶೀಲ್ದಾರ್‌ಗಳು
   ಇ) ತಹಶೀಲ್ದಾರ್‌ಗಳು
   ಈ) ಇಲಾಖೆಯ ಉನ್ನತಾಧಿಕಾರಿಗಳು
4. ಪಂಚಾಯತ್ ರಾಜ್ ಇಲಾಖೆ :–
   ಅ) ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು
   ಆ) ಕಾರ್ಯ ನಿರ್ವಹಣಾಧಿಕಾರಿಗಳು, ತಾಲೂಕು ಪಂಚಾಯತ್
   ಇ) ಇಲಾಖೆಯ ಉನ್ನತಾಧಿಕಾರಿಗಳು
5. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ :–
   ಅ) ಸಹಾಯಕ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು
   ಆ) ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳು
   ಇ) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
   ಈ) ಇಲಾಖೆಯ ಉನ್ನತಾಧಿಕಾರಿಗಳು
6. ಶಿಕ್ಷಣ ಇಲಾಖೆ :–
   ಅ) ಬ್ಲಾಕ್ ರಿಸೋರ್ಸ್ ಕೋ ಆರ್ಡಿನೇಟರ್
   ಆ) ಸರ್ವ ಶಿಕ್ಷಣ ಅಭಿಯಾನ ಅಧಿಕಾರಿಗಳು
   ಇ) ಕ್ಷೇತ್ರ ಶಿಕ್ಷಣಾಧಿಕಾರಿಗಳು
   ಈ) ಇಲಾಖೆಯ ಉನ್ನತಾಧಿಕಾರಿಗಳು
7. ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ :–
   ಅ) ಸಹಾಯಕ ನಿರ್ದೇಶಕರುಗಳು
   ಆ) ಹಿರಿಯ ಸಹಾಯಕ ನಿರ್ದೇಶಕರುಗಳು
   ಇ) ಉಪ ನಿರ್ದೇಶಕರುಗಳು
   ಈ) ಇಲಾಖೆಯ ಉನ್ನತಾಧಿಕಾರಿಗಳು
8. ನಗರಾಭಿವೃದ್ಧಿ ಇಲಾಖೆ :–
   ಅ) ಆರೋಗ್ಯ ನಿರೀಕ್ಷಕರು
   ಆ) ಕಂದಾಯ ನಿರೀಕ್ಷಕರು
   ಇ) ಮುಖ್ಯ ಅಧಿಕಾರಿಗಳು
   ಈ) ನಗರ ಸಭೆ ಆಯುಕ್ತರು
   ಉ) ಇಲಾಖೆಯ ಉನ್ನತಾಧಿಕಾರಿಗಳು
9. ರೇಷ್ಮೆ ಇಲಾಖೆ :–
   ಅ) ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರುಗಳು
   ಆ) ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳು
   ಇ) ಇಲಾಖೆಯ ಉನ್ನತಾಧಿಕಾರಿಗಳು
10. ಸಮಾಜ ಕಲ್ಯಾಣ ಇಲಾಖೆ :–
   ಅ) ತಾಲೂಕು ಸಮಾಜ ಕಲ್ಯಾಣ ಇಲಾಖೆ:
   ಆ) ಇಲಾಖೆಯ ಉನ್ನತಾಧಿಕಾರಿಗಳು
11 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ :–
   ಅ) ವಿಸ್ತರಣಾಧಿಕಾರಿಗಳು
   ಆ) ಇಲಾಖೆಯ ಉನ್ನತಾಧಿಕಾರಿಗಳು
12. ಕೃಷಿ ಇಲಾಖೆ :–
   ಅ) ಕೃಷಿ ಅಧಿಕಾರಿಗಳು
   ಆ) ಸಹಾಯಕ ನಿರ್ದೇಶಕರುಗಳು
   ಇ) ಇಲಾಖೆಯ ಉನ್ನತಾಧಿಕಾರಿಗಳು
13. ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ :–
   ಅ) ಕೈಗಾರಿಕ ವಿಸ್ತರಣಾಧಿಕಾರಿಗಳು
   ಆ) ಸಹಾಯಕ ನಿರ್ದೇಶಕರುಗಳು
   ಇ) ಇಲಾಖೆಯ ಉನ್ನತಾಧಿಕಾರಿಗಳು

**ಸರ್ಕಾರದ ಆದೇಶ ಸಂಖ್ಯೆ: ಕಾಇ 41 ಸಿಎಲ್‌ಸಿ 2019, ದಿನಾಂಕ: 13/01/2020 ರನ್ವಯ ರಕ್ಷಿಸಲ್ಪಟ್ಟ ಬಾಲ ಕಾರ್ಮಿಕರುಗಳನ್ನು ಕಡ್ಡಾಯವಾಗಿ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದೂಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿ ಸೇರಿಸಲಾಗುವುದು**

–:ಸಹಾಯವಾಣಿಗಳು:–

ಮಕ್ಕಳ ಸಹಾಯವಾಣಿ–1098, ಪೊಲೀಸ್ ಸಹಾಯವಾಣಿ–100, ವನಿತಾ ಸಹಾಯವಾಣಿ–1091, ಕಾರ್ಮಿಕ ಸಹಾಯವಾಣಿ–155214/9333333684
ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು–ದೂರವಾಣಿ: 080–22115291/92,